This question paper consists of **16 pages**, including **31 questions.**
ಈ ಪ್ರಶ್ನೆಪತ್ರಿಕೆಯಲ್ಲಿ **31** ಪ್ರಶ್ನೆಗಳಿದ್ದು **16** ಮುದ್ರಿತ ಪುಟಗಳನ್ನು ಹೊಂದಿದೆ.

**Roll No.**
ರೋಲ್ ನಂ. | | | | | | | | | | | | |

**9075**

# KANNADA
# ಕನ್ನಡ
# (208)

**Code No.** ಕೋಡ್ ನಂ. **70/S/O/K**

**Set A**

**Day and Date of Examination** ..............................................................................
ಪರೀಕ್ಷೆಯ ದಿನ ಮತ್ತು ತಾರೀಖು

**Signature of Invigilators** 1. ..........................................

ಉಸ್ತುವಾರಿದಾರರ ರುಜು 2. ..........................................

---

ಸಾಮಾನ್ಯ ಸೂಚನೆಗಳು :

**1.** ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

**2.** ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.

**3.** ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ **(A), (B), (C)** ಮತ್ತು **(D)** ಯನ್ನು ಬರೆಯಬೇಕು.

**4.** ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

**5.** ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

**6.** ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **70/S/O/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



UNNATI EDUCATIONS
EK KADAM UNNATI KI AUR
**UNNATI EDUCATION**
**9899-436-384: 9654-279-279**

# KANNADA
# ಕನ್ನಡ
# (208)

**ಸಮಯ : 3 ಗಂಟೆಗಳು** **ಗರಿಷ್ಠ ಅಂಕ : 100**

**ಸೂಚನೆಗಳು :** (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(2) ಪ್ರಶ್ನೆ ಮತ್ತು ಉಪ-ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(3) ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಶ್ನೆಗಳಿಗೆ ಕಡ್ಡಾಯವಾಗಿ ಉತ್ತರಿಸಿರಿ.

(1) Answers of all the questions are to be given in the Answer-Book given to you.

(2) 15 minutes time has been allotted to read this question paper. The question paper will be distributed at 2:15 p.m. From 2:15 p.m. to 2:30 p.m., the students will read the question paper only and will not write any answer on the Answer-Book during this period.

UNNATI EDUCATIONS
EK KADAM UNNATI KI AUR

ಸುಮಾರು 2500 ವರ್ಷಗಳ ಹಿಂದೆ ಬುದ್ಧನಿರಲಿಲ್ಲ. ಬೌದ್ಧಧರ್ಮವೂ ಇರಲಿಲ್ಲ. ಹಾಗೆಯೇ ಏಸುಕ್ರಿಸ್ತನಿಗೆ ಮುಂಚೆ ಕ್ರಿಸ್ತ ಧರ್ಮವಿರಲಿಲ್ಲ. ಇಸ್ಲಾಂ ಧರ್ಮ ಇನ್ನು ಈಚಿನದು. ಹಿಂದೂ ಧರ್ಮ ಸನಾತನ ಧರ್ಮವೆಂದೂ, ಅನಾದಿ, ಎಂದು ಹೆಸರು ಪಡೆದಿದ್ದರೂ ಅದಕ್ಕೂ ಒಂದು ಮೂಲವಿರಬೇಕು. ಈ ಎಲ್ಲಾ ಧರ್ಮಗಳು ಮನುಷ್ಯರಿಂದ ಸ್ಥಾಪಿಸಲ್ಪಟ್ಟವು. ಆದರೆ ಆ ಧರ್ಮಸ್ಥಾಪಕರು ತುಂಬಾ ಶ್ರೇಷ್ಠ ಮಟ್ಟದ ಮನುಷ್ಯರು. ನಿಸ್ವಾರ್ಥಿಗಳು, ಜಗತ್ತಿನ ಹಿತಕ್ಕಾಗಿ, ಮಾನವ ಕಲ್ಯಾಣಕ್ಕಾಗಿ ನೀತಿ ನಿಯಮಗಳನ್ನು ಪ್ರತಿಪಾದಿಸಿ ಶ್ರಮಿಸಿದ ಮಹಾನ್ ವ್ಯಕ್ತಿಗಳು. ಮೂಲತಃ ಎಲ್ಲ ಧರ್ಮಗಳ ನಂಬಿಕೆಯಂತೆ ದೇವರು ಒಬ್ಬನೇ ಆದರೂ ಅವನ ಸಾಕ್ಷಾತ್ಕಾರ ಪಡೆಯುವ, ವಿಧಾನದಲ್ಲಿ ವ್ಯತ್ಯಾಸಗಳಿದ್ದವು. ಧರ್ಮ ಹುಟ್ಟಿನ ಮೇಲೆ ಅವಲಂಬಿಸಿದೆ. ಸಾಮಾನ್ಯವಾಗಿ ಬದಲಾವಣೆಗೆ ಅವಕಾಶವಿಲ್ಲ. ಆದರೆ ಹಿಂದೆ ಮತಾಂತರಗಳು ದೊಡ್ಡ ಪ್ರಮಾಣದಲ್ಲಿ ಆಗುತ್ತಿದ್ದವು. ಒಬ್ಬ ರಾಜ ತನ್ನ ಧರ್ಮವನ್ನು ಸ್ವಇಚ್ಛೆಯಿಂದ ಬದಲಾಯಿಸಿದಾಗ ಪ್ರಜೆಗಳು ಕೂಡ ರಾಜನ ಧರ್ಮವನ್ನು ಅವಲಂಬಿಸುವುದು ಪದ್ಧತಿಯಾಗಿತ್ತು.

ಆ ಕಾಲದಲ್ಲಿ "ರಾಜಾ ಪ್ರತ್ಯಕ್ಷ ದೇವರೇ" ಆಗಿದ್ದನು. ಹಾಗೆಯೇ ಯುದ್ಧದಲ್ಲಿ ಸೋತ ರಾಜ ತನ್ನ ಪ್ರಜೆಗಳೊಂದಿಗೆ ಗೆದ್ದ ರಾಜನ ಧರ್ಮವನ್ನು ಅವಲಂಬಿಸುವುದು ವಾಡಿಕೆಯಾಗಿತ್ತು. ಆಮೇಲೆ ಆರ್ಥಿಕ, ಸಾಮಾಜಿಕ ಉದ್ದೇಶಗಳಿಗಾಗಿ ಮತಾಂತರ ಹೆಚ್ಚಾಯಿತು. ಆತ್ಮಸಾಕ್ಷಿಯಾಗಿ, ಮನಸ್ಪೂರ್ತಿ, ನಿಶ್ಚಿತಾಭಿಪ್ರಾಯ-ದಿಂದಾಗುವ ಮತಾಂತರಗಳು ತುಂಬಾ ಕಡಿಮೆ. ಒಟ್ಟಿನಲ್ಲಿ ಹಲವು ಧರ್ಮಗಳು ಮಾನವ ಜಾತಿಯನ್ನು ಅತಾರ್ಕಿಕ ತಳಹದಿಯ ಮೇಲೆ ಶಾಶ್ವತವಾಗಿ ಒಡೆದವು.



UNNATI EDUCATION
9899-436-384: 9654-279-279

1. ಗದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡಿರುವ ಪ್ರಕಾರ ಈ ಕೆಳಕಂಡ ವಾಕ್ಯಗಳಿಗೆ ಸರಿ / ತಪ್ಪು ತಿಳಿಸಿ (3ಕ್ಕೆ) ಮಾತ್ರ. **3 × 1 = 3**

(1) ಏಸುಕ್ರಿಸ್ತನಿಗೆ, ಮೊದಲು ಕ್ರೈಸ್ತ ಧರ್ಮವಿತ್ತು.

(2) ಧರ್ಮಸ್ಥಾಪಕರು ತುಂಬಾ ಶ್ರೇಷ್ಠ ಮಟ್ಟದ ಮನುಷ್ಯರು, ನಿಸ್ವಾರ್ಥಿಗಳು ಆಗಿದ್ದರು.

(3) ಧರ್ಮ ಹುಟ್ಟಿನ ಮೇಲೆ ಅವಲಂಬಿಸಿಲ್ಲ.

(4) "ರಾಜಾ" ಪ್ರತ್ಯಕ್ಷ ದೇವರು ಆಗಿದ್ದಾರೆ.

2. ಓದಿದ ಗದ್ಯ ಭಾಗಕ್ಕೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಒಂದು ಪದದಲ್ಲಿ ಉತ್ತರಿಸಿ. (3ಕ್ಕೆ ಮಾತ್ರ) **3 × 1 = 3**

(1) ಸುಮಾರು ಎಷ್ಟು ವರ್ಷಗಳ ಹಿಂದೆ ಬುದ್ಧ ಮತ್ತು ಬೌದ್ಧ ಧರ್ಮವಿರಲಿಲ್ಲ ?

(2) ಧರ್ಮಗಳು ಹುಟ್ಟಿದ್ದು ಯಾವ ಉದ್ದೇಶಕ್ಕಾಗಿ ?

(3) ಹಿಂದೂ ಧರ್ಮವನ್ನು ಏನೆಂದು ಕರೆಯುತ್ತಾರೆ ?

(4) ಧರ್ಮಗಳು ಯಾವ ತಳಹದಿಯ ಮೇಲೆ ಮಾನವ ಜಾತಿಯನ್ನು ಶಾಶ್ವತವಾಗಿ ಒಡೆದವು ?

3. ಸೂಚಿಸಿದಂತೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. (1ಕ್ಕೆ ಮಾತ್ರ) **1 × 1 = 1**

(i) "ಕರಾಳ" ಪದದ ಸಮಾನಾರ್ಥಕ ಪದವನ್ನು ಆರಿಸಿ, ಬರೆಯಿರಿ.

(A) ಭಯಂಕರ (B) ಕತ್ತಲೆ (C) ನಿಶೆ (D) ಹಗಲು

(ii) "ಧರ್ಮ" ಈ ಪದದ ವಿರುದ್ಧ ಪದದ ಅರ್ಥ.

(A) ಅಧರ್ಮ (B) ಭೂಮಿ (C) ಸಧರ್ಮ (D) ಕುಧರ್ಮ

4. ಈ ಕೆಳಕಂಡ ಸಾಲುಗಳನ್ನು ಪರಾಮರ್ಶಿಸಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. (5ಕ್ಕೆ ಮಾತ್ರ) **5 × 1 = 5**

ನೀವು "ಭವ್ಯಶ್ರೀ" – ಬೆಂಗಳೂರಿನ ನಿವಾಸಿ ಎಂದು ಭಾವಿಸಿ, ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ, ಬಸ್ ನಿಲ್ದಾಣದಲ್ಲಿ, ಹಾಗೂ ಬಸ್ಸ್ ಪ್ರಯಾಣದಲ್ಲಿ ಹಿರಿಯ ನಾಗರೀಕರು, ಅಂಗವಿಕಲ ಮತ್ತು ದೈಹಿಕ ಅಸಾಮರ್ಥ್ಯತೆಯುಳ್ಳವರು, ಇವರಿಗೆ ಉಂಟಾಗುವ ತೊಂದರೆಗಳ ಕುರಿತು ಸಂಬಂಧಪಟ್ಟವರು ಗಮನ ಹರಿಸುವಂತೆ ಮಾಡಲು ಒಂದು ಪತ್ರ ಬರೆಯಿರಿ.



UNNATI EDUCATIONS
EK KADAM UNNATI KI AUR
UNNATI EDUCATION
9899-436-384: 9654-279-279

(i) ಈ ಪತ್ರಕ್ಕೆ ಸರಿಯಾದ ವಿಷಯವನ್ನು ಆರಿಸಿ.

(A) ದೈಹಿಕ ಅಸಮರ್ಥತೆಯುಳ್ಳ, ಜನರ ಗಮನವನ್ನು ಸೆಳೆಯಲು

(B) ದೈಹಿಕ ಅಸಾಮರ್ಥ್ಯವುಳ್ಳವರನ್ನು ಕಡೆಗಣಿಸಿರುವುದು

(C) ಅಂಗವಿಕಲರಿಗೆ, ಬಸ್ ನಿಲ್ದಾಣದಲ್ಲಿ ಇರುವ ತೊಂದರೆ

(D) ಅಂಗವಿಕಲರು, ಬಸ್ ನಿಲ್ದಾಣದಲ್ಲಿ ಮತ್ತು ಬಸ್ಸ್ ಪ್ರಯಾಣದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು

(ii) ಈ ಕೆಳಕಂಡ ಅಪೂರ್ಣ ವಾಕ್ಯವನ್ನು ಸರಿಯಾದ ಆಯ್ಕೆಯಿಂದ ಪೂರ್ಣಗೊಳಿಸಿ.

ನನ್ನ ಪತ್ರವು _________ ಎಂದು ಭಾವಿಸುತ್ತೇನೆ.

(A) ಮೇಲ್ಕಂಡ ಸಮಸ್ಯೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತದೆ.

(B) ಬಸ್ ಪ್ರಯಾಣದ ಬಗ್ಗೆ ಜವಾಬ್ದಾರಿಯಾಗಿರುವ ಅಧಿಕಾರಿಗಳು ಎಚ್ಚೆತ್ತುಕೊಳ್ಳುವ ಬಗ್ಗೆ.

(C) ಪ್ರಜಾವಾಣಿ ಪತ್ರಿಕೆಯ ಪ್ರಸಾರದ ಅವಧಿ ಹೆಚ್ಚಳಕ್ಕೆ.

(iii) ಈ ಪತ್ರಕ್ಕೆ "ಭವ್ಯಶ್ರೀ" ಆಯ್ಕೆ ಮಾಡಿರುವ ಸಂಬಂಧಪಟ್ಟ ದೃಷ್ಟಿಕೋನ ಈ ರೀತಿ ಇದೆ.

(1) ದಿನಪತ್ರಿಕೆಯ ಹೆಸರು

(2) ದಿನಪತ್ರಿಕೆಗೆ ನೀಡಿರುವ ವಂತಿಗೆಯನ್ನು ಲಗತ್ತಿಸುವುದು

(3) ದಿವ್ಯಶ್ರೀ ವಿಳಾಸ

(4) ಔಪಚಾರಿಕ ಧ್ವನಿ

(5) ಪತ್ರ ಸ್ವೀಕರಿಸುವ ನಿರೀಕ್ಷಿತ ದಿನಾಂಕ

(A) (1) ಮತ್ತು (5) (B) (2), (3) ಮತ್ತು (4) (C) (3) ಮತ್ತು (5) (D) (1), (3), (4)

(iv) ದೈಹಿಕ ಅಸಮರ್ಥತೆಯ ಅಂಗವಿಕಲರು ಎದುರಿಸುತ್ತಿರುವ ತೊಂದರೆಗಳನ್ನು ವಿವರಿಸಲು "ಭವ್ಯಶ್ರೀ" ಯಾವುದನ್ನು ಆಯ್ಕೆ ಮಾಡಿಕೊಂಡಿರುತ್ತಾರೆ ?

(A) ವೀಲ್‌ಚೇರ್‌ಗಳು ಇಲ್ಲದೇ ಇರುವುದು.

(B) ಅಶುದ್ಧ ಶೌಚಾಲಯಗಳು, ನೀರಿನ ವ್ಯವಸ್ಥೆ ಇಲ್ಲದಿರುವುದು.

(C) ಅಂಗವಿಕಲರಿಗೆ ಸರಿಯಾದ ಮಾರ್ಗದರ್ಶನ ಇಲ್ಲದೇ ಇರುವುದು.

(D) ಪ್ರಯಾಣಕ್ಕೆ ಮತ್ತು ನಿಲ್ದಾಣದಲ್ಲಿ ಅನುಕೂಲವಾದ ವ್ಯವಸ್ಥೆ ಇಲ್ಲದೇ ಇರುವುದು.



UNNATI EDUCATIONS
EK KADAM UNNATI KI AUR
**UNNATI EDUCATION**
**9899-436-384: 9654-279-279**

(v) “ಭವ್ಯಶ್ರೀ” ಅವರು ಪತ್ರದಲ್ಲಿ ಕೆಲವು ಸಲಹೆಗಳನ್ನು ಸೂಚನೆಗಳನ್ನು ಸಂಬಂಧಪಟ್ಟ ವಿಷಯದಲ್ಲಿ ಹಂಚಿಕೊಂಡಿದ್ದಾರೆ. ಅವರ ಸೂಚನೆಗೆ ಸಹಾಯವಾಗುವಂತೆ ಈ ಕೆಳಕಂಡ ಸೂಕ್ತ ಆಯ್ಕೆಗಳನ್ನು ಮಾಡಲು ಸೂಚಿಸಿದೆ.

“ನನ್ನ ಅಭಿಪ್ರಾಯದಲ್ಲಿ ಮಾಧ್ಯಮಗಳು ಜನರನ್ನು ಜಾಗೃತಗೊಳಿಸಲು, ಬಹಳ ಮಹತ್ವದ ಪಾತ್ರ ವಹಿಸುತ್ತವೆ.”

(ಎ) ........................... ಮತ್ತು

(ಬಿ) ........................... ದೈಹಿಕ ಅಸಮರ್ಥ್ಯತೆಯುಳ್ಳ ಜನರ, ಅಗತ್ಯಗಳನ್ನು ಪ್ರಯಾಣದ ಸಂದರ್ಭದಲ್ಲಿ ಕಡೆಗಣಿಸಿರುವ ಬಗ್ಗೆ, ಸಕಾರಾತ್ಮಕ ಬದಲಾವಣೆಯನ್ನು ತರಲು ಸಹಾಯವಾಗಿದೆ.

(A) (ಎ) ಪರಂಪರೆ ಮತ್ತು ನಂಬಿಕೆಗಳು (ಬಿ) ಹಾಡುಗಳ ಸಂಯೋಜನೆ

(B) (ಎ) ಗ್ರಹಿಕೆ ಮತ್ತು ಧೋರಣೆ (ಬಿ) ಪ್ರಾಧಿಕಾರವನ್ನು ಜಾಗೃತಗೊಳಿಸುವುದು

(C) (ಎ) ಆದ್ಯತೆ ಮತ್ತು (ಬಿ) ಪ್ರತಿಭಟನೆ

(D) (ಎ) ಪ್ರತಿಕ್ರಿಯಗಳು ಮತ್ತು (ಬಿ) ಕನಿಷ್ಠ ಮಾಹಿತಿ ದೊರಕುವಂತೆ ಮಾಡುವುದು ಇದರಿಂದ

UNNATI EDUCATIONS
EK KADAM UNNATI KI AUR

5. ಈ ಕೆಳಗೆ ಕೊಟ್ಟಿರುವ ಸಾಲುಗಳನ್ನು ಪರಾಮರ್ಶಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. **4 × 1 = 4**

“ಕರ್ನಾಟಕ ಲೋಕೋಪಯೋಗಿ ಇಲಾಖೆ” ಬೆಂಗಳೂರು ದಕ್ಷಿಣ ಜಿಲ್ಲೆ ಇವರು ಒಂದು ದಿನದ ಮಟ್ಟಿಗೆ “ರಸ್ತೆ ರಿಪೇರಿ” ಕೆಲಸವನ್ನು ಮಾಡಿಸಲು, ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಸೇರುವ “ವಿಜಯನಗರ” ಮಾರ್ಗದ ರಸ್ತೆಯಲ್ಲಿ ಬೆಳಿಗ್ಗೆ 6.00 ರಿಂದ ಸಾಯಂಕಾಲ 6.00 ಗಂಟೆ–ಯವರೆಗೂ ವಾಹನಗಳ ಸಂಚಾರವನ್ನು ನಿಲ್ಲಿಸಲು ಸೂಚನೆಯನ್ನು ಏಪ್ರಿಲ್ 10 ರಂದು ನೀಡಿರುತ್ತಾರೆ. ಇದು 12 ಗಂಟೆಯ ಅವಧಿಗೆ ಸಂಬಂಧಿಸಿದ ಸೂಚನೆಯಾಗಿರುತ್ತದೆ. ಹಾಗೂ ಸಂಚಾರಕ್ಕೆ ಬದಲೀ ಮಾರ್ಗವನ್ನು ತೋರಿಸಿರುತ್ತಾರೆ.



**UNNATI EDUCATION**
**9899-436-384: 9654-279-279**

(i) ಈ ಕೆಳಕಂಡ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಆರಿಸಿ. ಮೇಲ್ಕಂಡ ಬರಹಕ್ಕೆ ಸೂಕ್ತ "ತಲೆಬರಹ" ವನ್ನು ಆರಿಸಿ.

(A) ಗಮನಿಸಿ / ಜಾಗೃತಿಸಿ (B) ಒಂದು ದಿನದ ಮಟ್ಟಿಗೆ ಸಹಕರಿಸಿ

(C) ರಸ್ತೆ ಬಳಕೆಗೆ ತಡೆಯೊಡ್ಡು (D) ಬದಲಾದ ಪ್ರಯಾಣದ ಮಾರ್ಗ

**ಅಥವಾ**

ಸೂಕ್ತವಾದ ಅಂತ್ಯದ ತೀರ್ಮಾನವನ್ನು ಮೇಲ್ಕಂಡ ಸೂಚನೆಗೆ ಗುರುತಿಸುವುದು.

(A) ಮಾಹಿತಿಯಲ್ಲಿರಿ (B) ಸಹಕರಿಸಿ

(C) ಸಿದ್ಧರಾಗಿರಿ (D) "ಅನಾನುಕೂಲಕ್ಕಾಗಿ ವಿಷಾದ"

(ii) ಕಾರ್ಯನಿರ್ವಾಹಕ ಅಭಿಯಂತರು – ಸಲಹೆ-ಸೂಚನೆ ನೀಡುವ ಅಂಶಗಳನ್ನು ಗುರುತಿಸಿ.

(A) ರಸ್ತೆ ರಿಪೇರಿಗೆ ಸಂಬಂಧಿಸಿದ ಕೆಲಸಗಳನ್ನು ಪರೀಕ್ಷಿಸುವುದು

(B) ರಸ್ತೆ ರಿಪೇರಿಯ ಮಾರ್ಗವನ್ನು ತಿಳಿಸುವುದು

(C) ರಸ್ತೆ ರಿಪೇರಿಗೆ ಕಾರಣಗಳು / ಅಗತ್ಯ

(D) ಮೇಲಿನ ಎಲ್ಲವೂ

(iii) ಈ ಸೂಚನೆ "ಕರ್ನಾಟಕ ಲೋಕೋಪಯೋಗಿ ಇಲಾಖೆ" ಬೆಂಗಳೂರು ಇದರ ಹೆಸರನ್ನು ಪ್ರತಿಬಿಂಬಿಸುತ್ತದೆಯೆ ?

(A) "ಇಲ್ಲ" ಏಕೆಂದರೆ ಇದು ಸ್ಪಷ್ಟವಾದ ಹೆಸರಿದೆ

(B) "ಹೌದು" ಏಕೆಂದರೆ ಇದು ಅನೌಪಚಾರಿಕ

(C) "ಹೌದು" ಏಕೆಂದರೆ ಇದು ಆಡಳಿತಾತ್ಮಕವಾಗಿದೆ

(D) "ಇಲ್ಲ" ಏಕೆಂದರೆ ಇದು ಅಧಿಕೃತ ಸಹಿಯ ಮೂಲಕ ಬಂದಿರುತ್ತದೆ

(iv) ಸೂಚನೆಗೆ ಸಂಬಂಧಿಸಿದ ಆಧಾರದ ಅಂಶಗಳನ್ನಾಗಿ ಗುರುತಿಸಿ.

(A) ರಸ್ತೆ ರಿಪೇರಿಯ ದಿನಾಂಕ

(B) ರಸ್ತೆ ರಿಪೇರಿಯ ಅವಧಿ

(C) ರಸ್ತೆ ರಿಪೇರಿಯ ಕಾರಣವಾಗಿ ಮಾರ್ಗವನ್ನು "ಬಂದ್" ಮಾಡಿರುವುದು

(D) ಮೇಲಿನ ಎಲ್ಲವೂ



UNNATI EDUCATIONS
EK KADAM UNNATI KI AUR
UNNATI EDUCATION
9899-436-384: 9654-279-279

**6.** ಈ ಕೆಳಕಂಡ ಪ್ರಶ್ನೆಗಳನ್ನು, ನೀಡಿರುವ "ಪಠ್ಯದ" ಆಧಾರದ ಮೇಲೆ, ನೀಡಲಾಗಿದೆ. ಆದುದರಿಂದ ಪಠ್ಯವನ್ನು, ಜಾಗೃತಿಯಿಂದ ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ. (4ಕ್ಕೆ ಮಾತ್ರ) **$4 \times 1 = 4$**

ರಾಜೇಶ್‌ರವರು "ಪರಿಸರ ಕ್ಲಬ್" ನ ಸದಸ್ಯರಲ್ಲಿ ಒಬ್ಬರು ಮತ್ತು ಹೋರಾಟಗಾರರು. ಪರಿಸರ ಸಂರಕ್ಷಣೆ ಮತ್ತು ಉಳಿವಿಗಾಗಿ ಹೋರಾಟವನ್ನು ನಡೆಸಿರುತ್ತಾರೆ. "ಪರಿಸರ ಮಾಲಿನ್ಯ"ವನ್ನು ತಡೆಯುವುದು, ಪರಿಸರ ಉಳಿವಿಗಾಗಿ ಗಿಡಗಳನ್ನು ನೆಡುವುದು, ಅವುಗಳ ಸಂರಕ್ಷಣೆ, ಪ್ರಾಣಿಗಳ ಸಂರಕ್ಷಣೆ ಮತ್ತು "ಕೆರೆಗಳ ಸಂರಕ್ಷಣೆ" ಇದರಲ್ಲಿ ಸೇರಿರುತ್ತದೆ.

ಮಾನವನು ಮನುಕುಲದ ಉಳಿವಿಗಾಗಿ, ಪರಿಸರದ ಜೊತೆ ಹೇಗೆ ಹೊಂದಿಕೊಂಡು, ಬದುಕು ನಡೆಸಬೇಕಾಗಿದೆ. ಮಾನವ ಮತ್ತು ಪರಿಸರದ ನಡುವೆ ಔಚಿತ್ಯಪೂರ್ಣ, ಶಾಂತಿಯುತ ಸಂಬಂಧವನ್ನು ಕಾಪಾಡಿಕೊಂಡು "ಪರಿಸರವನ್ನು ರಕ್ಷಿಸುವ" ಬಗ್ಗೆ ಲೇಖನವನ್ನು ಬರೆದಿರುತ್ತಾರೆ.

(i) ಈ ಕೆಳಕಂಡ ಸಲಹೆಗಳಲ್ಲಿ/ಸೂಚನೆಗಳಲ್ಲಿ ಯಾವುದು ರಾಜೇಶ್‌ರವರ ಲೇಖನಕ್ಕೆ ಸೂಕ್ತವಾಗುತ್ತದೆ ?

(1) ಪರಿಸರ ಮಾಲಿನ್ಯವನ್ನು ಉಂಟು ಮಾಡುತ್ತಿರುವ ವಾಹನ ದಟ್ಟಣೆಗೆ ಮತ್ತು ಕೆರೆಗಳ ಮಾಲಿನ್ಯತೆಯ ಬಗ್ಗೆ ಅರಿವು ಮೂಡಿಸುವುದು.

(2) "ಪರಿಸರ"ವನ್ನು ಹಾಳುಮಾಡುತ್ತಿರುವವರಿಗೆ "ಸೂಕ್ತದಂಡನೆ" ವಿಧಿಸುವುದು

(3) "ಪರಿಸರ"ವನ್ನು ರಕ್ಷಿಸುವ ಬಗ್ಗೆ ಮಾರ್ಗಗಳನ್ನು ಬಲಪಡಿಸುವುದು

(4) "ಪರಿಸರ ಕ್ಲಬ್"ಗಳನ್ನು ಹೆಚ್ಚು ಹೆಚ್ಚು ಸ್ಥಾಪಿಸುವುದು ಮತ್ತು ಸಂಶೋಧನೆಯನ್ನು ಉನ್ನತೀಕರಿಸುವುದು

(A) ಆಯ್ಕೆ (1) (B) ಆಯ್ಕೆ (2)

(C) ಆಯ್ಕೆ (3) (D) ಆಯ್ಕೆ (4)

(ii) ರಾಜೇಶ್ ರವರ ಲೇಖನಕ್ಕೆ ಈ ಕೆಳಕಂಡ ಪಟ್ಟಿಯಲ್ಲಿ ಸೂಕ್ತ ಬಿರುದನ್ನು ಗುರುತಿಸಿ.

(A) ಪರಿಸರ ಮತ್ತು ಮಾನವನ ಉಳಿವಿಗಾಗಿ ಹೋರಾಟ

(B) "ಮನುಕುಲ"ದ ಮುಂದಿನ ಭವಿಷ್ಯ ರೂಪಿಸುವಿಕೆ

(C) "ಪರಿಸರ ಸಂರಕ್ಷಣೆ"

(D) ಪರಿಸರ ಮಾಲಿನ್ಯ ನಿರ್ಮೂಲನಗೊಳಿಸುವುದು

UNNATI EDUCATIONS
EK KADAM UNNATI KI AUR



**UNNATI EDUCATION**
**9899-436-384: 9654-279-279**

(iii) ರಾಜೇಶ್‌ರವರಿಗೆ ಅವರ ಆದರ್ಶಗಳಿಗೆ ತಕ್ಕಂತೆ ಅವರ ಲೇಖನಕ್ಕೆ ಯಾವ ಆಯ್ಕೆಯು ಹೊಂದುತ್ತದೆ ?

(1) ಅನೇಕ ಪ್ರಸಂಗಗಳಲ್ಲಿ ಪರಿಸರವನ್ನು ಹಾಳು ಮಾಡುತ್ತಿರುವವರ ಬಗೆಗಿನ ಕಾರಣಗಳು ಮತ್ತು ಅವುಗಳ ಪರಿಣಾಮಗಳ ಬಗ್ಗೆ.

(2) "ಪರಿಸರ ಮಾಲಿನ್ಯ"ದ ಪರಿಣಾಮದ ಬಗ್ಗೆ ವಿವರಣೆ ಹಾಗೂ ಪರಿಸರ ಸ್ವಚ್ಛತೆಯ ಉಳಿವಿಗಾಗಿ ಸಲಹೆ ನೀಡುವುದು

(3) ಲೇಖನದ ಉದ್ದೇಶವನ್ನು ಪರಿಚಯಿಸುತ್ತ ಪರಿಸರ ಸಂರಕ್ಷಣೆಯ ಬಗೆಗಿನ ಕಾನೂನು ಮತ್ತು ನಿಯಮವನ್ನು ತಿಳಿಸುವುದು ಹಾಗೂ ಕಾನೂನಾತ್ಮಕವಾಗಿ ಪರಿಸರ ಉಳಿವಿಗಾಗಿ ಸಲಹೆ ಮಾರ್ಗದರ್ಶನ ನೀಡುವುದು.

(4) "ಪರಿಸರ ಸಂರಕ್ಷಣೆ"ಯ ಕಾನೂನು ಸಮರ್ಥತೆಯ ಬಗ್ಗೆ ಹಾಗೂ ಪರಿಸರ ಅಭಿವೃದ್ಧಿ ಬಗ್ಗೆ, ತಮ್ಮ ಲೇಖನದ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ. ಸಲಹೆ ಮತ್ತು ಸೂಚನೆಗಳನ್ನು ನೀಡಿದ್ದಾರೆ.

(A) ಆಯ್ಕೆ (1) (B) ಆಯ್ಕೆ (2)

(C) ಆಯ್ಕೆ (3) (D) ಆಯ್ಕೆ (4)

(iv) ಈ ಲೇಖನ ಇದನ್ನು ಹೊಂದಿಲ್ಲ

(A) ಲೇಖನದ ಶಿರೋನಾಮೆ (B) ಲೇಖನ ಬರೆದ ದಿನಾಂಕ

(C) ಲೇಖಕರ ಕಾಳಜಿ (D) ಈ ವಿಷಯಕ್ಕೆ ಸಂಬಂಧಿಸಿದಂತಹವರ ಹೆಸರು

UNNATI EDUCATIONS
EK KADAM UNNATI KI AUR

(v) ಈ ವಾಕ್ಯವನ್ನು ಓದಿ "ರಾಜೇಶ್"ರವರ ಲೇಖನದ ಬರಹಕ್ಕೆ ಸೂಕ್ತವಾದ ಆಯ್ಕೆಯನ್ನು ಬರೆಯಿರಿ.

ಪರಿಸರವನ್ನು ರಕ್ಷಿಸುವ ಬಗ್ಗೆ ಕಾಳಜಿ ಮೂಡಿಸಬೇಕಾಗಿದೆ. ಪರಿಸರ ಮತ್ತು ಮನುಷ್ಯನ ನಡುವಿನ ಸಂಬಂಧ ಅವಿನಾಭವತೆಯಿಂದ ಕೂಡಿದೆ. "ಪರಿಸರ"ದ ಉಳಿವು ಪ್ರತಿಯೊಬ್ಬ ಮಾನವ ಜೀವಿಯ ಕರ್ತವ್ಯವಾಗಬೇಕಾಗಿದೆ.

ಮಾನವನು ____________ ಕ್ರಮ ಕೈಗೊಳ್ಳಬೇಕಾಗಿದೆ. ಹಾಗೂ ಪರಿಸರದ ಬಗ್ಗೆ, ಉಳಿವಿಗಾಗಿ ____________ ಮೂಡಿಸುವ ಕ್ರಮ ಕೈಗೊಳ್ಳಬೇಕಾಗಿದೆ.

(A) (1) ಹೋರಾಟ (2) ಮಾರಕ ಪರಿಣಾಮಗಳ ಬಗ್ಗೆ

(B) (1) ಅರಿವು ಮೂಡಿಸು (2) ಕಾಳಜಿ ಮೂಡಿಸುವುದು

(C) (1) ಭಯ ಮತ್ತು ದುರಂತ ಪರಿಣಾಮಗಳ ಬಗ್ಗೆ

(D) (1) ಚಿಂತನೆ (2) ಅಪಾಯಕಾರಿ ಫಲಿತಾಂಶಗಳನ್ನು ತಡೆಗಟ್ಟುವುದು



**UNNATI EDUCATION**
**9899-436-384: 9654-279-279**

## ವಿಭಾಗ – ಸಿ

## ವ್ಯಾಕರಣ

7. ಈ ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿ ನಿಮ್ಮ ಸ್ವಂತ ವಾಕ್ಯಗಳನ್ನು ರಚನೆ ಮಾಡಿ. (3ಕ್ಕೆ ಮಾತ್ರ) **3 × 1 = 3**

(i) ಪುಸ್ತಕ (ii) ಬಯಲು (iii) ನಾಚಿಕೆ (iv) ಅಭಿಮಾನ

**ಅಥವಾ**

ಕೆಳಗಿನ ಪದಗಳನ್ನು ಅರ್ಥಪೂರ್ಣವಾಗಿ ಕ್ರಮಪಡಿಸಿ ಬರೆಯಿರಿ. (3ಕ್ಕೆ ಮಾತ್ರ)

(i) ನೆಲಕ್ಕೆ ಬಿದ್ದರು, ಮೀಸೆ, ಜಟ್ಟಿ ಮಣ್ಣಾಗಲಿಲ್ಲ

(ii) ಸಾಧ್ಯವಾಗಲಿಲ್ಲ, ಡೊಂಗರು ಕಪ್ಪೆ, ನೀರುಹಾವು, ನುಂಗಲು,

(iii) ಗುಡಿಸಿಲಿನ ಮುಂದೆ ಭಿಕ್ಷೆ ನಿಂತು ಮಾದೇಶ್ವರರು, ಬೇಡಿದರು

(iv) ಘರ್ಜಿಸಿತು, ಸಿಂಹ, ಕಾನನದ ಮಧ್ಯೆ,

8. ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ ಮತ್ತು ಸಂಧಿ/ಸಮಾಸ ಹೆಸರಿಸಿ. (3ಕ್ಕೆ ಮಾತ್ರ) **3 × 1 = 3**

(i) ಒಂದು + ಕಟ್ಟ

(ii) ಎರಡು + ಮಡಿ

(iii) ಊರು + ಊರು

(iv) ನ್ಯಾಯ + ಆಸ್ಥಾನ

**ಅಥವಾ**

ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರನ್ನು ತಿಳಿಸಿ.

(i) ಈಗಿಗ (ii) ಧರ್ಮಾವತಾರ (iii) ರಥೋತ್ಸವ (iv) ಸೂರ್ಯೋದಯ

UNNATI EDUCATIONS
EK KADAM UNNATI KI AUR

9. ಈ ಕೆಳಕಂಡ ವಾಕ್ಯಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (3ಕ್ಕೆ ಮಾತ್ರ) **3 × 1 = 3**

(i) ನೀರು ಬದುಕಿಗೆ ಅತ್ಯಮೂಲ್ಯ "<u>ಅಮೃತ</u>".
"ಅಮೃತ" ಇದು ಯಾವ ಪದ ?

(ii) ಶಿವನು ನಂಬಿಯಣ್ಣಗೆ <u>ಒಲಿದಿದ್ದಾನೆ</u>.
ಈ ವಾಕ್ಯದಲ್ಲಿನ ಕ್ರಿಯಾ ಪದವನ್ನು ಗುರುತಿಸಿ.

(iii) ಭಾರತಾಂಬೆ ಹಿಮಾಲಯದ ಸಿರಿಮುಡಿಯನ್ನು ಧರಿಸಿದ್ದಾಳೆ.
(ನಾಮಪದವನ್ನು ಆರಿಸಿ ಬರೆಯಿರಿ)

(iv) ಅರ್ಜುನನು ಗಾಂಡೀವವನ್ನು ಎತ್ತಿದನು.
("ಗಾಂಡೀವ"ವನ್ನು ಇಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ)

**ಅಥವಾ**



UNNATI EDUCATION
9899-436-384: 9654-279-279

ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ. (3ಕ್ಕೆ ಮಾತ್ರ) $3 \times 1 = 3$

(i) ಕಾರಯ್ಯನ ಮಕ್ಕಳೇ ಇವರು ________.

(A) ನಗರವಾಸಿಗಳು (B) ಅರಣ್ಯವಾಸಿಗಳು

(C) ಸೋಲಿಗರು (D) ಬಿಲ್ಲಯ್ಯ

(ii) ಕ್ಷಯ ರೋಗಕ್ಕೆ ________ ತಿಂಗಳು ಔಷಧಿ ಸೇವಿಸಬೇಕು.

(A) 18 ತಿಂಗಳು (B) 20 ತಿಂಗಳು (C) 5 ತಿಂಗಳು (D) 3 ತಿಂಗಳು

(iii) ನಂಜಣ್ಣಗ ________ ಶಿವನೋಡೋ.

(A) ಒಲಿದಾನ (B) ಒಡಿದಾನ (C) ಮುನಿದಾನ (D) ಸೋತಾನೋ

(iv) ಕುಮಾರವ್ಯಾಸ ________ ಆಗಿದ್ದಾರೆ.

(A) ಕಲಾವಿದ (B) ಕವಿ (C) ಸಾಧು (D) ನಟ

**10.** ಈ ಕೆಳಕಂಡ ಬಿಟ್ಟ ಸ್ಥಳಗಳನ್ನು ಸೂಕ್ತ ಕ್ರಿಯಾಪದಗಳಿಂದ ಭರ್ತಿ ಮಾಡಿ. $4 \times 1 = 4$

(i) ದೇವರನ್ನು ಎಬ್ಬಿಸಲು ಉದಯರಾಗ ________.

(ii) ಸ್ತ್ರೀ ಜನ ಸೇವೆಯನ್ನು ಗಾಂಧೀಜಿಯವರು ಸತ್ಯಾಗ್ರಹದಿಂದಲೇ ________.

(iii) ಕಂಪ್ಯೂಟರ್‌ನ ಸಹಾಯದಿಂದ ಆದಾಯ ತೆರಿಗೆಯನ್ನು ಕ್ಷಣದಲ್ಲಿ ಗುಣಿಸಿ ________.

(iv) ಕಥಾನಾಯಕನು ಮನೆಬಿಟ್ಟ ________.

**11.** ಈ ಕೆಳಕಂಡ ವಾಕ್ಯಗಳಲ್ಲಿನ ಲೇಖನ ಚಿಹ್ನೆಗಳನ್ನು ಗುರುತಿಸಿ. (2ಕ್ಕೆ ಮಾತ್ರ) $2 \times 1 = 2$

(i) ಸಂಗೀತ ಸಂಯೋಜನೆ ಮಾಡಬೇಕೆ ಸರಿಯಾದ ಸಾಫ್ಟ್‌ವೇರ್ ಬಳಸಿದರೆ, ಕಂಪ್ಯೂಟರ್ ಮೇಲೆ ಸಂಗೀತ ಯೋಜಿಸಬಹುದು

(ii) ದೃಷ್ಟಿ ತೆಗೆಯಲು ಮಾಡುವ ಮೂಢ ಆಚರಣೆ ಯಾವುದು

(iii) ಆ ಹಕ್ಕಿ ತಲೆಯೊಳಗಿರುವ ಮಿದುಳಿನ ಕತೆ ಏನು

**12.** ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. (3ಕ್ಕೆ) $3 \times 1 = 3$

(1) ನಾನೆದ್ದು ________ ಸಂಧಿಗೆ ಉದಾಹರಣೆ.

(ಅ) ಗುಣಸಂಧಿ (ಆ) ಯಣ್‌ಸಂಧಿ (ಇ) ಆಗಮಸಂಧಿ

(2) ಸ್ತುತಿ – ನಿಂದೆಗಳು ಬಂದಡೆ ಮನದಲ್ಲಿ________ ತಾಳದೆ ಸಮಾಧಾನಿಯಾಗಿರಬೇಕು.

(ಕೋಪವ, ಸಂತಸವ, ತಾಪವ, ದ್ವೇಷವ)

(3) "ಶೂನ್ಯ"ದ ತದ್ಭವ ರೂಪ ________

(ಸೊನ್ನೆ, ಜೀರೋ, ಸನ್ನೆ, ಸಾನೆ)



UNNATI EDUCATIONS
EK KADAM UNNATI KI AUR
UNNATI EDUCATION
9899-436-384: 9654-279-279

**13.** ಈ ಕೆಳಕಂಡ ವಾಕ್ಯಗಳು ಸರಿಯೇ ಅಥವಾ ತಪ್ಪೇ, ತಿಳಿಸಿ. (3ಕ್ಕೆ ಮಾತ್ರ) **3 × 1 = 3**

(i) "ಆಹುತಿ" ಕತೆಯನ್ನು ಬರೆದವರು ಕೊಡಗಿನ ಗೌರಮ್ಮ.

(ii) ಗಂಡನಿಗೆ ಸೀತೆ ಎದಿರಾಡಿರಲಿಲ್ಲ.

(iii) ಆಚಾರವಂತರ, ಮನೆಯಲ್ಲಿ ತಿಥಿ ಕಾರ್ಯಗಳನ್ನು ಮಾಡುವಾಗ,
ಬೆಕ್ಕನ್ನು ಮನೆಯ ಕಂಬಕ್ಕೆ ಕಟ್ಟಿದ್ದರು.

(iv) ನೀಲೇಗೌಡ ಕಾಡಿಗೆ ಹೆಜ್ಜೇನು ಬೇಟೆಗೆ ಹೋದನು.

**14.** ಈ ಕೆಳಕಂಡ ಗದ್ಯವನ್ನು ಓದಿ ಹಾಗೂ ಕೆಳಕಂಡ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳವನ್ನು ತುಂಬಿರಿ.
(3ಕ್ಕೆ ಮಾತ್ರ) **3 × 1 = 3**

ಒಂದು ದಿನ ಕಾಡಿನಲ್ಲಿ ಮಾದೇಶ್ವರರ ಜೊತೆಯಲ್ಲಿ, ಕಾರಯ್ಯ, ಬಿಲ್ಲಯ್ಯರು ಹೋಗುತ್ತಿದ್ದಾಗ ಒಂದು "ಉಡ" ಹುತ್ತದ ಮೇಲೆ ಬಿಸಿಲು ಕಾಯುತ್ತ ಮಲಗಿತ್ತು. ಅದನ್ನು ನೋಡಿದ ಕಾರಯ್ಯನಿಗೆ ಬಾಯಲ್ಲಿ ನೀರೂರಿ ಒಂದೇ ಹೆಜ್ಜೆ ಹಾರಿ ಆ "ಉಡ" ವನ್ನು ಹಿಡಿದನು. ಇದನ್ನು ಗಮನಿಸಿದ ಮಾದೇಶ್ವರರು ಈ ಕಾರಯ್ಯ ಮಡ್ಡಿ ಮಾಂಸ ತಿನ್ನುವುದನ್ನು ಕಲಿತಿದ್ದಾನೆ. ಈತನು ಹೂ ಮಜ್ಜಿನ ತರುವುದು ಬೇಡವೆಂದು ಆಜ್ಞೆ ಮಾಡಿ ಬಿಲ್ಲಯ್ಯನನ್ನು ಪೂಜೆಗಿಟ್ಟುಕೊಂಡು, ಕಾರಯ್ಯನನ್ನು, ಬಾಗಿಲನ್ನು ಕಾಯಲು ಇಟ್ಟುಕೊಂಡರು. ಮುಂದೆ ಬಿಲ್ಲಯ್ಯ ಶಿವಾಚಾರಿಯಾದ, ಮಡ್ಡಿ, ಮಾಂಸ ತಿನ್ನುವ ಕಾರಯ್ಯ ಸ್ವಾಮಿ ಕಾವಲು ಕಾಯುವುದು, ಕಾಡಿನಲ್ಲಿ ತಿರುಗುವುದು, ಕಲಿತುಕೊಂಡು ಮಲೆ ಸೋಲಿಗನಾದ. ಈ ಕಾರಯ್ಯನ ಮಕ್ಕಳೇ ಕಾರಮಕ್ಕ ಅಂದರೆ ಸೋಲಿಗರು. ಈ ಕಾರಯ್ಯನೇ ಸೋಲಿಗರ ಮೂಲದವನು.

(i) ಒಂದು ಉಡ ಹುತ್ತದ ಮೇಲೆ ________ ಮಲಗಿತ್ತು.

(ii) ಉಡವನ್ನು ನೋಡಿದ ಕಾರಯ್ಯನಿಗೆ ________ ಒಂದೇ ಹೆಜ್ಜೆ ಹಾರಿ ಉಡವನ್ನು ಹಿಡಿದನು.

(iii) ಮಾದೇಶ್ವರರು ________ ಪೂಜೆಗಿಟ್ಟುಕೊಂಡರು.

(iv) ________ ಸೋಲಿಗರ ಮೂಲದವನು.



UNNATI EDUCATIONS
EK KADAM UNNATI KI AUR
**UNNATI EDUCATION**
**9899-436-384: 9654-279-279**

15. ಈ ಕೆಳಕಂಡ ಗದ್ಯವನ್ನು ಓದಿ ಈ ಕೆಳಕಂಡ ವಾಕ್ಯಗಳು ಸರಿಯೋ ತಪ್ಪೋ ತಿಳಿಸಿ. (3ಕ್ಕೆ ಮಾತ್ರ) 3 × 1 = 3

ಕಂಪ್ಯೂಟರ್, ದೂರ ಸಂಪರ್ಕ ಮಾಧ್ಯಮ. ತಂತ್ರಜ್ಞಾನದೊಡನೆ ಜೋಡಣೆಗಾಗಿ, ನಮ್ಮ ಬದುಕಿನಲ್ಲಿ ಹಾಗೂ ಜೀವನ ವಿಧಾನದಲ್ಲಿ ಆಗಾಧ ಬದಲಾವಣೆಯನ್ನು ತರುತ್ತಿದೆ. ಕಂಪ್ಯೂಟರ್ ಹಾಗೂ ದೂರ ಸಂಪರ್ಕ ಮಾಧ್ಯಮಗಳು ಅಭಿವೃದ್ಧಿಗೊಂಡಂತೆ, "ಕೆಲಸ" ಉದ್ಯೋಗದ ವಿಚಾರಗಳೇ, ತೀವ್ರವಾಗಿ ಬದಲಾಗಿವೆ. ಇಂದು ಎಷ್ಟೋ ಮಂದಿ "ಉದ್ಯೋಗಸ್ಥರು" ಕಛೇರಿಗಳಿಗೆ ಹೋಗದೆ ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ದೂರವಾಣಿ ಮೂಲಕ ಇವರ ಮನೆಯಲ್ಲಿನ ಕಂಪ್ಯೂಟರಿಗೆ ಸಂಪರ್ಕ ಏರ್ಪಡಿಸಲಾಗಿದೆ. ಇದನ್ನು ಟೆಲಿಕಮ್ಯೂಟಿಂಗ್ ಎನ್ನುತ್ತಾರೆ. ಭಾರೀ ವೇಗದಲ್ಲಿ ಭಾರೀ ಮಾಹಿತಿಯನ್ನು ರವಾನಿಸಬಲ್ಲ ಸಂಪರ್ಕ ವ್ಯವಸ್ಥೆ ಹಾಗೂ ಕಂಪ್ಯೂಟರ್‌ಗಳು ಸಾಮಾನ್ಯವಾದಂತೆ ಕಚೇರಿಗಳಿಗೆ ಹೋಗಿ ಕೆಲಸ ಮಾಡುವ ಅಗತ್ಯವೇ ಉಳಿಯುವುದಿಲ್ಲ. ಮನೆಯಿಂದಲೇ, ಮನೆಯಲ್ಲಿ ಕುಳಿತಂತೆ ಯಾವುದೇ ಮೂಲೆಯ ಮಾಹಿತಿಯನ್ನು ಪಡೆದು ಕೆಲಸ ಮುಗಿಸಿ ಮಾಹಿತಿಯನ್ನು ರವಾನಿಸಬಹುದು.

(i) ಕಂಪ್ಯೂಟರ್ ; ದೂರ ಸಂಪರ್ಕ ಮಾಧ್ಯಮ ತಂತ್ರಜ್ಞಾನದೊಡನೆ, ಜೋಡಣೆಯಾಗಿಲ್ಲ.

(ii) ಕಂಪ್ಯೂಟರ್ ಮತ್ತು ದೂರಸಂಪರ್ಕ ಮಾಧ್ಯಮಗಳು ಅಭಿವೃದ್ಧಿಗೊಂಡಂತೆ, ಕೆಲಸ ಮತ್ತು ಉದ್ಯೋಗದ ವಿಚಾರಗಳೇ ತೀವ್ರ ಬದಲಾಗಿವೆ.

(iii) ಉದ್ಯೋಗಸ್ಥರ ಮನೆಯಲ್ಲಿನ ದೂರವಾಣಿ ಮೂಲಕ ಕಂಪ್ಯೂಟರಿಗೆ ಸಂಪರ್ಕ ಏರ್ಪಡಿಸಿಲ್ಲ.

(iv) ಕಂಪ್ಯೂಟರ್ ಮತ್ತು ದೂರವಾಣಿ ಸಂಪರ್ಕ ಮಾಧ್ಯಮಗಳು ಅಭಿವೃದ್ಧಿಗೊಂಡು, ಉದ್ಯೋಗಸ್ಥರು ಮನೆಯಿಂದಲೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

16. ಹೊಂದಿಸಿ ಬರೆಯಿರಿ. 3 × 1 = 3

| ಅ | ಆ |
|---|---|
| (a) ಮಂಡೋದರಿ | (i) ರಾಮ |
| (b) ಬಿಲ್ಲು | (ii) ಗುಹೇಶ್ವರ |
| (c) ಅಲ್ಲಮಪ್ರಭು | (iii) ರಾವಣ |



UNNATI EDUCATIONS
EK KADAM UNNATI KI AUR
UNNATI EDUCATION
9899-436-384: 9654-279-279

ಈ ಕೆಳಕಂಡ ಗದ್ಯ ಭಾಗವನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸಿರಿ.

ಆ ಮುದುಕ ಒಬ್ಬ ರತ್ನ ವ್ಯಾಪಾರಿ. ನಾನು ಯಾರೆಂದು ಕೇಳಿದುದಕ್ಕೆ, ನಾನೊಬ್ಬ ಬಡವರ ಮಗನೆಂದು ಎಂ.ಎ. ಪಾಸಾಗಿದೆಯೆಂದೂ, ಕೆಲಸ ಹುಡುಕಲು, ಮದರಾಸಿಗೆ, ಹೋಗುತ್ತಿದ್ದೇನೆಂದು ಹೇಳಿದೆ. ಕೆಲಸ ಸಿಕ್ಕದಿದ್ದರೆ ತನ್ನನ್ನು ನೋಡಬೇಕೆಂದು ಹೇಳಿದ. ಅಷ್ಟು ಹೊತ್ತಿನಲ್ಲೇ ಮದರಾಸನ್ನು ತಲುಪಿದ್ದೆವು. ನಾನು ಓದುವಾಗ ವಾಸವಾಗಿದ್ದ ವೈ.ಎಂ.ಸಿ.ಎ. ಗೆ ಹೋದೆ. ಲಾ ಕಲಿಯುತ್ತಿದ್ದ ನನ್ನ ಸ್ನೇಹಿತರನೇಕರು ಅಲ್ಲಿದ್ದರು. ಅವರೊಡನೆ ಮಾತನಾಡುತ್ತಾ ಅಂದು ಅಲ್ಲೇ ಉಳಿದೆವು.

ಮರುದಿನದಿಂದ ಕೆಲಸ ಹುಡುಕಲು ಪ್ರಾರಂಭಿಸಿದೆ. ನನ್ನ ದುರದೃಷ್ಟದಿಂದ ಎಲ್ಲಿಯೂ ಕೆಲಸ ಸಿಗಲಿಲ್ಲ. ಮದರಾಸಿಗೆ ಬಂದು, ಆಗಲೇ ಎರಡು ವಾರ ಕಳೆದಿದ್ದವು. ಕೈಯಲ್ಲಿದ್ದ ಕೆಲವು ರೂಪಾಯಿಗಳು ಖರ್ಚಾಗಿದ್ದವು, ಊಟಕ್ಕೆ ತೊಂದರೆಯಾಗಿತ್ತು. ಬೇರೇನೂ ದಿಕ್ಕು ತೋಚದೆ ರೈಲಿನ ಸ್ನೇಹಿತನ ಮನೆಗೆ ಹೋದೆ. ದೇವರ ದಯೆಯಿಂದ ನಾನಲ್ಲಿಗೆ ಹೋಗುವ ಹೊತ್ತಿಗೆ ಆತನೂ ಮನೆಯಲ್ಲಿದ್ದನು. ನಾನು ಬಂದುದ್ದನ್ನು ನೋಡಿ ಅವನಿಗೆ ಬಲು ಸಂತೋಷವಾಯಿತು. ಮಾತುಕತೆಯಾದ ಬಳಿಕ ನನಗೆ ಕೆಲಸ ಸಿಗಲಿಲ್ಲವೆಂದವನಿಗೆ ಗೊತ್ತಾಯಿತು. ಅವನಿಗೊಬ್ಬ ಮಗಳೂ ದೂರ ಸಂಬಂಧ ಸೊಸೆಯು ಇದ್ದರು. ಅವರಿಬ್ಬರಿಗೂ ಪಾಠ ಹೇಳಿಕೊಡಲು ಆಗುತ್ತದೆಯೇ ಎಂದು ನನ್ನನ್ನು ಕೇಳಿದ. ಏನೂ ಕೆಲಸವಿಲ್ಲದ ನನಗೆ ಅದೇ ಬಲು ದೊಡ್ಡ ಕೆಲಸವೆಂದಾಯಿತು. ಹೇಳಿಕೊಡಲು ಒಪ್ಪಿಕೊಂಡು, ಮರುದಿನದಿಂದ ಪಾಠ ಹೇಳಲು ಉಪಕ್ರಮಿಸಿದೆ.

UNNATI
EDUCATIONS
EK KADAM UNNATI KI AUR

**17.** ಕಥಾನಾಯಕನಿಗೆ ರೈಲಿನಲ್ಲಿ ಪರಿಚಯವಾದ ವ್ಯಕ್ತಿ ಯಾರು ? ಆತ ಏನು ಮಾಡುತ್ತಿದ್ದನು ? **2**

ಅಥವಾ

ಕಥಾನಾಯಕನು, ರೈಲಿನಲ್ಲಿ ಪರಿಚಯವಾದ ವ್ಯಕ್ತಿಗೆ ತನ್ನನ್ನು ಹೇಗೆ ಪರಿಚಯಿಸಿಕೊಂಡರು ?

**18.** ಮದರಾಸಿಗೆ ಹೋದ ಕಥಾನಾಯಕನು, ಎಲ್ಲಿಗೆ ಹೋಗಿ ಉಳಿದುಕೊಂಡರು ? **2**

**ಅಥವಾ**

ಕಥಾನಾಯಕನು ಕೆಲಸ ಹುಡುಕಲು ಪ್ರಾರಂಭಿಸಿದಾಗ, ಆದ ಅನುಭವವೇನು ?

**19.** ಕೆಲಸ ಸಿಗದಿದ್ದಾಗ, ಕಥಾನಾಯಕನು ಯಾರನ್ನು ಭೇಟಿ ಮಾಡಿದರು ?
ಅಲ್ಲಿ ನಡೆದ ಮಾತುಕತೆ ಏನು ? **2**

**20.** ರತ್ನ ವ್ಯಾಪಾರಿ, ಕಥಾನಾಯಕನಿಗೆ ಯಾವ ಕೆಲಸ ಮಾಡಲು ಹೇಳಿದರು ? **2**



**UNNATI EDUCATION**
**9899-436-384: 9654-279-279**

**21.** ನೀವು ರಾಧಿಕಾ / ರಮೇಶ, ಊರು ಭದ್ರಾವತಿ ಎಂದು ಭಾವಿಸಿ, ನಿಮ್ಮ ಬೀದಿಯ ಮತ್ತು ಸುತ್ತಮುತ್ತ ಇರುವ ಇತರೆ ರಸ್ತೆಗಳ ಬೀದಿ ದೀಪಗಳು ಕೆಟ್ಟುಹೋಗಿವೆ, ಅದನ್ನು ಸರಿಪಡಿಸಲು ವಿನಂತಿಸಿ, ಅಭಿಯಂತರರು, ಕೆ.ಇ.ಬಿ. ಭದ್ರಾವತಿ ಇವರಿಗೆ ಪತ್ರ ಬರೆಯಿರಿ. **4 × 1 = 4**

**ಅಥವಾ**

ನೀವು "ರಿತ್ವಿಕ್", ತಂದೆ ವೆಂಕಟಪ್ಪ ಊರು, ಶಿವಮೊಗ್ಗ, ಬಿ.ಸಿ.ಎ. ಪದವೀಧರರು ಎಂದು ಭಾವಿಸಿ, ಕಾರ್ಯದರ್ಶಿಗಳು, "ಕರ್ನಾಟಕ ಲೋಕ ಸೇವಾ ಆಯೋಗ" ಇವರಿಗೆ ಇಲ್ಲಿ ಖಾಲಿ ಇರುವ ಕಂಪ್ಯೂಟರ್ "ಸಹಾಯಕ" ರ ಹುದ್ದೆಗೆ ಪೂರ್ಣ ವಿವರಗಳೊಂದಿಗೆ ಅರ್ಜಿ ಸಲ್ಲಿಸಿರಿ. **4**

**22.** ಈ ಕೆಳಕಂಡ ದೂರವಾಣಿ ಸಂಭಾಷಣೆಯನ್ನು ಓದಿ, ಸಂಕ್ಷಿಪ್ತವಾಗಿ ವಿಷಯದ ಮಾಹಿತಿಯನ್ನು ಬರೆಯಿರಿ. **2**

ಜ್ಯೋತಿ : ಹಲೋ ಕೀರ್ತಿ ಹೇಗಿದ್ದೀಯ ? ಶಾಲಾ ಪರೀಕ್ಷಾ ಸಿದ್ಧತೆ ಹೇಗೆ ನಡೆದಿದೆ ?

ಕೀರ್ತಿ : ಹಾಂ ಜ್ಯೋತಿ, ಚೆನ್ನಾಗಿದ್ದೇನೆ. ಪರೀಕ್ಷಾ ತಯಾರಿಯನ್ನು ಚೆನ್ನಾಗಿ ನಡೆಸುತ್ತಿದ್ದೇನೆ, ಅಭ್ಯಾಸ ಮಾಡುತ್ತಿದ್ದೇನೆ.

ಜ್ಯೋತಿ : ತುಂಬಾ ಸಂತೋಷ. ನೀನು ರಾಜ್ಯಕ್ಕೆ ಮೊದಲಿಗಳಾಗಬೇಕೆಂಬುದು, ನನ್ನ ಹಾರೈಕೆ.

ಕೀರ್ತಿ : ನಿಮ್ಮೆಲ್ಲರ ಹಾರೈಕೆಯಿಂದ, ನಾನು ಖಂಡಿತಾ ರಾಜ್ಯಕ್ಕೆ ಮೊದಲಿಗಳಾಗಿ, ತೇರ್ಗಡೆ-ಯಾಗುತ್ತೇನೆ.

ಜ್ಯೋತಿ : ಒಳ್ಳೆಯದು, ಸತತ ಅಭ್ಯಾಸ, ಪರಿಶ್ರಮದಿಂದ ಖಂಡಿತಾ ನಿನ್ನ ಗುರಿಯನ್ನು, ಸಾಧಿಸು. ದೇವರು ಒಳ್ಳೆಯದನ್ನು ಮಾಡಲಿ.

ಕೀರ್ತಿ : ಧನ್ಯವಾದಗಳು, ಜ್ಯೋತಿ. ಮತ್ತೆ ದೂರವಾಣಿ ಮಾಡುತ್ತೇನೆ.

ಜ್ಯೋತಿ : ಸರಿ, ಹಾಗೆ ಆಗಲಿ.

UNNATI
EDUCATIONS
EK KADAM UNNATI KI AUR

**23.** "ನಮ್ಮ ಊರ ಕೆರೆ" — ಈ ವಿಷಯದ ಬಗ್ಗೆ ವಾಕ್ಯವೃಂದ ರಚಿಸಿ. **6**

**ಅಥವಾ**

"ಗ್ರಹಣಗಳು" — ಈ ವಿಷಯ ಕುರಿತು ಈ ಕೆಳಕಂಡ ಸುಳುಹುಗಳನ್ನು ಆಧರಿಸಿ, ಪ್ರಬಂಧ ಬರೆಯಿರಿ.

(i) ಭೂಮಿ – ಸೂರ್ಯ – ಚಂದ್ರ – ಒಂದೇ ರೇಖೆಯಲ್ಲಿ ಬಂದಾಗ ಗ್ರಹಣ

(ii) ಸೂರ್ಯ, ಚಂದ್ರರ ನಡುವೆ ಭೂಮಿ ಬಂದಾಗ – ನಡೆಯುವ ಗ್ರಹಣ

(iii) ಸೂರ್ಯ ಗ್ರಹಣ / ಚಂದ್ರ ಗ್ರಹಣ

(iv) ಖಗ್ರಾಸ ಹಾಗೂ ಪೂರ್ಣ ಗ್ರಹಣ

(v) ಕತ್ತಲು ಕವಿಯುವುದು

(vi) ಗ್ರಹಣ ಸಂಬಂಧಿತ ಆಚರಣೆಗಳು / ನಂಬಿಕೆ

(vii) ಬರೀ ಕಣ್ಣಿನ ವೀಕ್ಷಣೆಯಿಂದಾಗುವ ಅಪಾಯಗಳು

(viii) ಪ್ರವಾಹ ಹೆಚ್ಚುವುದು, ಬಿರುಗಾಳಿ ಬೀಸುವುದು



**UNNATI EDUCATION**
**9899-436-384: 9654-279-279**

## ವಿಭಾಗ – ಸಿ : ವ್ಯಾಕರಣ

**24.** "ರಾಜೇಶ್ವರಿ" ಯ ಮುಖ ಕಮಲದಂತಿರುವುದು. ಈ ವಾಕ್ಯದಲ್ಲಿನ ಅಲಂಕಾರವನ್ನು ವಿವರಿಸಿ. ಅಲಂಕಾರದ ಹೆಸರನ್ನು ಬರೆಯಿರಿ. **1 × 2 = 2**

**25.** ಈ ಕೆಳಕಂಡ ಸಂಸ್ಕೃತ ಪದಗಳಿಗೆ ಕನ್ನಡ ಪದಗಳನ್ನು ಬರೆಯಿರಿ. (2ಕ್ಕೆ ಮಾತ್ರ) **2 × 1 = 2**

(i) ಯಾತ್ರೆ (ii) ಕೋಕಿಲೆ (iii) ಯಮ (iv) ಲತಾ

**26.** ಈ ಕೆಳಗೆ ಕೊಟ್ಟಿರುವ ಪದಗಳ ವಿಗ್ರಹ ವಾಕ್ಯ ಮಾಡಿ ಸಮಾಸ ಹೆಸರಿಸಿ. (3ಕ್ಕೆ ಮಾತ್ರ) **3 × 1 = 3**

(i) ತುದಿ ಕೈ (ii) ಮುಂದಲೆ (iii) ಕೆರೆಕಟ್ಟೆ (iv) ಇಂಚರ

**27.** ಬಿಟ್ಟ ಸ್ಥಳಗಳನ್ನು ಸೂಚನೆಗನುಗುಣವಾಗಿ ತುಂಬಿರಿ. **4**

(i) "ಹೊಂಬಣ್ಣ"ಎನ್ನುವುದು ________ ಸಮಾಸಕ್ಕೆ ಉದಾಹರಣೆ.

(ii) ಬೇಗ ಬೇಗ : ದ್ವಿರುಕ್ತಿ ಪದವಾದರೆ, ಝುಳ ಝುಳ — ಯಾವ ಪದಕ್ಕೆ ಉದಾಹರಣೆಯಾಗಿದೆ ?

(iii) ಇಳೆ, ಬೆಳೆ, ಸುಳಿ ಆದಿಪ್ರಾಸವಾದರೆ, ಅಂತ್ಯಪ್ರಾಸಕ್ಕೆ ಉದಾ : ________ ಆಗಿದೆ.

(iv) ಎಕ್ಸರೇ – ಅನ್ಯದೇಶ್ಯ ಪದ ; ನೀರು – ________.

**28.** ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ. **4 × 1 = 4**

(i) ಸಕ್ಕರೆ, ಸಿಹಿ, ಸವಿ, ರಕುತ,

(ii) ಆಯುರ್ವೇದ, ಹೋಮಿಯೋಪತಿ, ಆಲೋಪತಿ, ವನಸ್ಪತಿ

(iii) ಮಳೆ, ನೀರು, ಕೆಸರು, ಭೂಮಿ

(iv) ಶಿವ, ಈಶ್ವರ, ಗಜಾನನ, ಪರಮೇಶ್ವರ

ಅಥವಾ

ಬೆಂಗಳೂರಿನ ಷೋರೂಂ ಒಂದರಲ್ಲಿ ಮಾರಾಟವಾದ ಬೈಕುಗಳ ಸಂಖ್ಯೆ ಈ ಕೆಳಕಂಡಂತಿದೆ. ಅದರ ಸಹಾಯದಿಂದ ಒಂದು "ಏಕ" ರೇಖಾ ಚಿತ್ರ ರಚಿಸಿ.

| ವರ್ಷ | 1996 | 1997 | 1998 | 1999 | 2000 | 2001 | 2002 | 2003 | 2004 | 2005 |
|---|---|---|---|---|---|---|---|---|---|---|
| ಮಾರಾಟವಾದ ಸಂಖ್ಯೆ | 118 | 225 | 230 | 338 | 470 | 530 | 640 | 670 | 690 | 750 |



UNNATI EDUCATION
9899-436-384: 9654-279-279

## ಡಿ – ವಿಭಾಗ ಸಾಹಿತ್ಯ (ಕಾವ್ಯ + ಗದ್ಯ)

**29.** ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ. (3ಕ್ಕೆ ಮಾತ್ರ) **2 × 3 = 6**

(i) ಹೊತ್ತಿಗೆಯಿಂದ ಪ್ರಯೋಜನವೇನು ?

(ii) ನವಿಲು ಎಲ್ಲಿ ಆಡುತ್ತದೆ ?

(iii) ನಾವು ಆಡುವ ಮಾತು ಹೇಗಿರಬೇಕು ?

(iv) ಪ್ರೀತಿ ಎಂಬ ಪ್ರಶ್ನೆಗೆ ಉತ್ತರ ಸಿಗುವುದು ಎಲ್ಲಿ ?

**30.** ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ. (3ಕ್ಕೆ ಮಾತ್ರ) **2 × 3 = 6**

(i) ಕಡೂರಿನ ಜನರು ಲೇಖಕರೊಂದಿಗೆ ಮಾತನಾಡುವಂತೆ ಯಾರಿಗೆ ಹೇಳಿದರು ?

(ii) ಅಹಿಂಸೆಯ ಮುಂದೆ ಯಾವುದು ಹೇಗೆ ಕರಗುತ್ತದೆ ?

(iii) ಎಬ್ಬಿಸುವವರ ದೃಷ್ಟಿಯಲ್ಲಿ ಬೆಳಗಿನ ಜಾವದ ಮಹತ್ವವೇನು ?

(iv) ಹ್ಯುಯೆನ್ ತ್ಸಾಂಗನು ಪ್ರವಾಸಕ್ಕೆ ಹೊರಡಲು ಯಾವ ರೀತಿ ತಯಾರಿ ನಡೆಸಿದನು ?

**31.** ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ **30** ರಿಂದ **40** ಪದಗಳಲ್ಲಿ ಉತ್ತರಿಸಿ. **1 × 3 = 3**

(i) ನಮ್ಮ ಸಮಾಜದಲ್ಲಿ ಇಂದಿಗೂ ಇರುವ ಮೂಢನಂಬಿಕೆಗಳಾವುವು ?

(ii) ರಾವಣನ ಹೃದಯ ಪಶ್ಚಾತ್ತಾಪದಿಂದ ಹೇಗೆ ಪರಿವರ್ತನೆಗೊಂಡಿತು ? ವಿವರಿಸಿ.

---



UNNATI EDUCATIONS
EK KADAM UNNATI KI AUR
**UNNATI EDUCATION**
**9899-436-384: 9654-279-279**